# ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು-560018**

ಸಂಖ್ಯೆ: ಕಸಂವಿ:ಸಂಶಿನಿ:ಪರೀಕ್ಷಾಂಗ/ಸಂ.ವೇ.ಜೈ.ಪ.ಅಧಿಸೂಚನೆ/2016-17 ದಿನಾಂಕ:-22.09.2016

## ಅಧಿಸೂಚನೆ

**ವಿಷಯ :-** 2016-17ನೇ ಸಾಲಿನಲ್ಲಿ ನಡೆಯುವ ಸಂಸ್ಕೃತ ವೇದ ಮತ್ತು ಜೈನ ತರಗತಿಗಳ ಪ್ರಸಿದ್ಧ ಪರೀಕ್ಷೆಗಳಿಗೆ ಅರ್ಜಿಗಳನ್ನು ಆಹ್ವಾನಿಸುವ ಬಗೆಗೆ.

ಪರೀಕ್ಷಾ ಅರ್ಜಿ ಮತ್ತು ನಾಮಾಂಕಿತ ಪಟ್ಟಿಗಳನ್ನು ಸಲ್ಲಿಸುವ ವಿಧಾನ.

**(ಅಧಿಸೂಚನೆಯನ್ನು ಸಂಪೂರ್ಣ ಓದಿದ ನಂತರದಲ್ಲಿ ಮಾಹಿತಿಯನ್ನು ಭರ್ತಿಮಾಡಿ)**

| ವಿದ್ಯಾರ್ಥಿಗಳು ಶುಲ್ಕ ಮತ್ತು ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ | ಡಿಮ್ಯಾಂಡ್ ಡ್ರಾಫ್ಟ್(ಡಿ.ಡಿ) ತೆಗೆಯುವ ಅಂತಿಮ ದಿನಾಂಕ | ಡಿಮ್ಯಾಂಡ್ ಡ್ರಾಫ್ಟ್(ಡಿ.ಡಿ) ಮತ್ತು ನಾಮಾಂಕಿತ ಪಟ್ಟಿಗಳನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವ ಅಂತಿಮ ದಿನಾಂಕ |
|---|---|---|
| **05.11.2016** | **08.11.2016** | **15.11.2016** |

1. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಥವಾ ಸಂಸ್ಕೃತ ಶಿಕ್ಷಣನಿರ್ದೇಶನಾಲಯದಿಂದ ಅಧಿಕೃತವಾಗಿ ಮಾನ್ಯತೆ ಪಡೆದ ಪಾಠಶಾಲೆಗಳಿಂದ ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ.**(ಶಾಲಾ ಮಾನ್ಯತಾ ಪತ್ರವನ್ನು /ಮಾನ್ಯತಾ ನವೀಕರಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸುವುದು. ಸಲ್ಲಿಸದಿದ್ದ ಪಕ್ಷದಲ್ಲಿ ಅರ್ಜಿಗಳನ್ನು ಸ್ವಸ್ಪವಾಗಿ ತಿರಸ್ಕರಿಸಲಾಗುವುದು)**

2. ಪರೀಕ್ಷಾ ಶುಲ್ಕವನ್ನು ನಿಗದಿತ ದಿನಾಂಕದಂದು ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು **(Finance Officer, Karnataka Sanskrit University, Bangalore)** ಈ ಹೆಸರಿಗೆ ಡಿಮ್ಯಾಂಡ್ ಡ್ರಾಫ್ಟ್(ಡಿ.ಡಿ)ತೆಗೆದು ಕಳುಹಿಸುವುದು. ವಿಳಂಬವಾಗಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

3. ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದ ಎಲ್ಲಾ ಪರೀಕ್ಷಾ ಸಂಬದ್ಧ ಮಾಹಿತಿಗಳನ್ನು **Microsoft word, pdf, image** ನಲ್ಲಿ ಕಳುಹಿಸಬಾರದು. ಕೇವಲ **Microsoft excel sheet** ನಲ್ಲಿ ಕಳುಹಿಸಬೇಕು. **Font size- 12. Font name - Cambria (Headings)**. ಕನ್ನಡ ಆದಲ್ಲಿ ನುಡಿ ತತ್ಸಾಂಶದಲ್ಲಿ **Font size-12** ರಲ್ಲಿ ಇರಬೇಕು. ವಿದ್ಯಾರ್ಥಿಗಳ ಮಾಹಿತಿಯನ್ನು ಸಿಡಿಯಲ್ಲಿ ಹಾಗೂ **examdse@gmail.com** ಈ ಇ-ಮೇಲ್ ವಿಳಾಸಕ್ಕೆ ಸಕಾಲದಲ್ಲಿ ಕಳುಹಿಸುವುದು. (ನಾಮಾಂಕಿತ ಪಟ್ಟಿಯಲ್ಲಿ ಸಾಹಿತ್ಯ ವಿದ್ಯಾರ್ಥಿಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ಪರೀಕ್ಷೆಗಳ ವಿದ್ಯಾರ್ಥಿಗಳ ಹೆಸರನ್ನು ಯಾವುದೇ ಕಾರಣಕ್ಕೂ ಆಂಗ್ಲ ಭಾಷೆಯಲ್ಲಿ ಬರೆಯುವಂತಿಲ್ಲ.) ಮತ್ತು ಪ್ರತಿಯನ್ನು **(hard copy)** ಪರೀಕ್ಷಾ ನಿಯಂತ್ರಕರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ-18 ಈ ವಿಳಾಸಕ್ಕೆ ಕಳುಹಿಸುವುದು.

   ವಿ.ಸೂ :- ಮೇಲ್ಕಂಡ ಸೂಚನೆಯಂತೆ ನಾಮಾಂಕಿತ ಪಟ್ಟಿಯನ್ನು ಸಲ್ಲಿಸದೇ ಇದ್ದಲ್ಲಿ ಮುಂದಿನ ಆಗು ಹೋಗುಗಳಿಗೆ ಶಾಲೆಯ ಮುಖ್ಯಸ್ಥರೇ ಜವಾಬ್ದಾರರಾಗಿರುತ್ತಾರೆ.

4. ಸಂಸ್ಕೃತ ಪ್ರಥಮಾ, ಕಾವ್ಯ ಮತ್ತು ವೇದ ಪ್ರಥಮಾ, ಪ್ರವೇಶ ಹಾಗೂ ಜೈನ ಪ್ರಯೋಗ ಪ್ರಥಮಾ, ಪ್ರವೇಶಿಕಾ ತರಗತಿಗಳಿಗೆ ಆವೇದನಾ ಪತ್ರಗಳಿರುವುದಿಲ್ಲ, ಬದಲಾಗಿ ನಾಮಾಂಕಿತ ಪಟ್ಟಿಯನ್ನು ಈ ಅಧಿಸೂಚನೆ ಜೊತೆಗೆ ಲಗತ್ತಿಸಲಾಗಿದೆ. ಎರಡು ವಿಧವಾದ ನಮೂನೆಗಳಲ್ಲಿ **Microsoft excel sheet** ನಲ್ಲಿ ಟೈಪ್ ಮಾಡಿಸಿ ಅದರ ಸಾಫ್ಟ್ ಕಾಪಿಯನ್ನು

**examdse@gmail.com** ಈ ಇ-ಮೇಲ್ ವಿಳಾಸಕ್ಕೆ ನಿಗಧಿತ ಸಮಯದೊಳಗೆ ಸಲ್ಲಿಸುವುದು. ಸಾಹಿತ್ಯ, ವೇದಮೂಲ ಮತ್ತು ಜೈನಪ್ರಯೋಗ ಪ್ರವೀಣ ತರಗತಿಗಳಿಗೆ ಆವೇದನಾ ಪತ್ರಗಳಿದ್ದು ಆವೇದನಾ ಪತ್ರಗಳಿಗೆ ಅಭ್ಯರ್ಥಿಗಳ ಭಾವಚಿತ್ರ ಸಹಿತ ನಾಮಾಂಕಿತ ಪಟ್ಟಿಯೊಂದಿಗೆ ದೃಢೀಕರಿಸಿ ಸಲ್ಲಿಸುವುದು.

5. ಕಾವ್ಯ,ಸಾಹಿತ್ಯ, ವೇದ ಪ್ರವೇಶ/ವೇದಮೂಲ ಪರೀಕ್ಷೆಯಲ್ಲಿ ಹಾಜರಾಗುವ ಪರೀಕ್ಷಾ ಅಭ್ಯರ್ಥಿಗಳ ಯೋಗ್ಯತಾ ಪ್ರಮಾಣ ಪತ್ರವನ್ನು ನಾಮಾಂಕಿತ ಪಟ್ಟಿಯ ಹಾಗೂ ಅರ್ಜಿಯ ಜೊತೆ ಲಗತ್ತಿಸಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ತಿರಸ್ಕರಿಸಲಾಗುವುದು.

6. ಎಲ್ಲಾ ತರಗತಿಗಳ ನಾಮಾಂಕಿತ ಪಟ್ಟಿಗಳನ್ನು ತರಗತಿವಾರು, ಪ್ರತ್ಯೇಕವಾಗಿ ಸಲ್ಲಿಸುವುದು. ಈ ಅಧಿಸೂಚನೆಯ ಜೊತೆಗೆ ಲಗತ್ತಿಸಿರುವ ಅನುಬಂಧ-1 ರ ಮಾದರಿಯಲ್ಲಿ ಐಚ್ಛಿಕ ವಿಷಯ ಮತ್ತು ವಿನಾಯಿತಿ ಇರುವ ವಿಷಯಗಳನ್ನು ಸ್ಪಷ್ಟವಾಗಿ ನಮೂದಿಸುವುದು. ಪ್ರಥಮಾ,ಕಾವ್ಯ,ಸಾಹಿತ್ಯ  ತರಗತಿಗಳಿಗೆ ಸಂಬಂಧಿಸಿದ ಅನುಬಂಧ-1 ರ ಮಾಹಿತಿಯನ್ನು ಪ್ರತ್ಯೇಕವಾಗಿ ತಯಾರಿಸಿ ಮೇಲೆ ಹೇಳಿದ ರೀತಿಯಲ್ಲಿ ಸಲ್ಲಿಸಬೇಕು. ಅನುಬಂಧ-2 ರಲ್ಲಿ ಶುಲ್ಕದ ವಿವರ ಹಾಗೂ ಶುಲ್ಕ ವಿನಾಯಿತಿಗೆ ಕಾರಣ ಮತ್ತು ಪ್ರತ್ಯೇಕ ವಿದ್ಯಾರ್ಥಿಗಳ ಸಂಖ್ಯೆ, ಬ್ಯಾಂಕಿನ ವಿವರಗಳನ್ನು ಸ್ಪಷ್ಟವಾಗಿ ನಮೂದಿಸುವುದು. ವಿನಾಯಿತಿ ಪಡೆಯಲಿಚ್ಛಿಸುವ ವಿಷಯಗಳಿಗೆ ನಾಮಾಂಕಿತ ಪಟ್ಟಿಯಲ್ಲಿ **Z** ಎಂದು ನಮೂದಿಸುವುದು. ಪುನರಾವರ್ತಿತ ಅಭ್ಯರ್ಥಿಗಳಿಗೆ ಈ ಹಿಂದೆ ನೀಡಿದ ನೋಂದಣಿ ಸಂಖ್ಯೆಗಳನ್ನೇ ನಾಮಾಂಕಿತ ಪಟ್ಟಿಯಲ್ಲಿ ನಮೂದಿಸತಕ್ಕದ್ದು. ಅನುಕೂಲವಾಗುವಂತೆ ಅನುಬಂಧ 1 ಮತ್ತು 2 ರ ಮಾದರಿಯನ್ನು ಅಧಿಸೂಚನೆಯ ಜೊತೆ ಲಗತ್ತಿಸಿ ಸಲ್ಲಿಸಿದೆ.

7. ಸಂಸ್ಕೃತ ಕಾವ್ಯ, ವೇದ ಪ್ರವೇಶ, ಜೈನಪ್ರಯೋಗ ಪ್ರವೇಶಿಕಾ ತರಗತಿಗಳ ವಿದ್ಯಾರ್ಥಿಗಳಿಗೆ ಪ್ರಸಕ್ತ ಶೈಕ್ಷಣಿಕ ವರ್ಷದ ಎಸ್,ಎಸ್,ಎಲ್,ಸಿ ತರಗತಿಯ ಭಾಷಾ ವಿಷಯಗಳು ಮತ್ತು ಸಾಹಿತ್ಯ, ವೇದ ಮೂಲ ಹಾಗೂ ಜೈನ ಪ್ರಯೋಗ ಪ್ರವೀಣ ತರಗತಿಗಳ ವಿದ್ಯಾರ್ಥಿಗಳಿಗೆ ಪಿ.ಯು.ಸಿ ಭಾಷಾ ವಿಷಯಗಳು ಕಡ್ಡಾಯವಾಗಿದ್ದು 1ನೇ ಪತ್ರಿಕೆ ಸಂಸ್ಕೃತ/ಕನ್ನಡ 2ನೇ ಪತ್ರಿಕೆ ಇಂಗ್ಲೀಷ್/ಹಿಂದಿ ಈ ವಿಷಯದಲ್ಲಿ ಪರೀಕ್ಷೆಯನ್ನು ಬರೆಯುವುದು ಕಡ್ಡಾಯವಾಗಿರುತ್ತದೆ.

8. ಕಾವ್ಯ ಮತ್ತು ಸಾಹಿತ್ಯಕ್ಕೆ ಸಮವಾಗಿ ಭಾಷಾ ಪತ್ರಿಕೆಗಳನ್ನು ವೇದ ಪ್ರವೇಶ ಮತ್ತು ವೇದ ಮೂಲ ವಿದ್ಯಾರ್ಥಿಗಳಿಗೆ ಬರೆಯಲು ಸೂಚಿಸಿದೆ.

9. ಭಾಷಾ ಪತ್ರಿಕೆಯಿಂದ ವಿನಾಯ್ತಿ ಪಡೆಯಬೇಕಾದ ವಿದ್ಯಾರ್ಥಿಗಳ ಎಸ್.ಎಸ್.ಎಲ್.ಸಿ. ಅಥವಾ ಪಿ.ಯು.ಸಿ. ಉತ್ತೀರ್ಣರಾದ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳನ್ನು ಶಾಲಾ ಮುಖ್ಯೋಪಾಧ್ಯಾಯರು ದೃಢೀಕರಿಸಿ ಸಲ್ಲಿಸುವುದು ಮತ್ತು ಅದನ್ನು ತಪ್ಪದೇ ನಾಮಾಂಕಿತ ಪಟ್ಟಿಯಲ್ಲಿ **Z** ಎಂದು ನಮೂದಿಸಿ ಸಲ್ಲಿಸುವುದು. **Z** ಎಂದು ನಮೂದಿಸದಿರುವ ವಿದ್ಯಾರ್ಥಿಗಳಿಗೆ ವಿನಾಯಿತಿ ನೀಡಲಾಗುವುದಿಲ್ಲ.

10. ಭಾಷಾ ಪತ್ರಿಕೆ ಬರೆಯುವ ವಿದ್ಯಾರ್ಥಿಗಳು ಯಾವ ಭಾಷಾ ಪತ್ರಿಕೆಯನ್ನು ಬರೆಯುತ್ತಾರೆ ಎಂಬುದನ್ನು ತಿಳಿಸಬೇಕು ಅದನ್ನು ತಪ್ಪದೇ ನಾಮಾಂಕಿತ ಪಟ್ಟಿಯಲ್ಲಿ ನಮೂದಿಸಿ ಸಲ್ಲಿಸುವುದು.

11. ಕಾವ್ಯ ಮತ್ತು ಜೈನಪ್ರಯೋಗ ಪ್ರವೇಶಿಕ ತರಗತಿಗಳ ಭಾಷಾ ವಿಷಯಕ್ಕೆ ಸಂಬಂಧಿಸಿದ 1ನೇ ಮತ್ತು 2ನೇಪತ್ರಿಕೆಗಳು 10ನೇ ತರಗತಿಯ ಪ್ರಸಕ್ತ ಶೈಕ್ಷಣಿಕ ವರ್ಷದ ಪ್ರಥಮ ಭಾಷೆ ಸಂಸ್ಕೃತ-ಕನ್ನಡ ದ್ವಿತೀಯ ಭಾಷೆ ಆಂಗ್ಲ, ತೃತೀಯ ಭಾಷೆ ಹಿಂದಿ ವಿಷಯಗಳಿಗೆ ಅನುಗುಣವಾಗಿರುತ್ತದೆ.

12. ಸಾಹಿತ್ಯ, ವೇದಮೂಲ ಮತ್ತು ಜೈನಪ್ರಯೋಗ ಪ್ರವೀಣ ತರಗತಿಗಳ ಭಾಷಾ ವಿಷಯಕ್ಕೆ ಸಂಬಂಧಿಸಿದಂತೆ ದ್ವಿತೀಯ ಪಿ.ಯು.ಸಿ.ಯ ಪತ್ರಿಕೆ 1 ಸಂಸ್ಕೃತ/ಕನ್ನಡ ಮತ್ತು 2ನೇ ಪತ್ರಿಕೆ ಇಂಗ್ಲೀಷ್/ಹಿಂದಿ ವಿಷಯಗಳಿಗೆ ಅನುಗುಣವಾಗಿರುತ್ತದೆ.

13. ವೇದಪ್ರಥಮಾ, ಜೈನಪ್ರಥಮಾ ವಿದ್ಯಾರ್ಥಿಗಳು ಸಂಸ್ಕೃತ **ಪ್ರಥಮಾ ದ್ವಿತೀಯ** ಪತ್ರಿಕೆಯನ್ನು, ವೇದ ಪ್ರವೇಶ ಹಾಗೂ ಜೈನ ಪ್ರವೇಶ ವಿದ್ಯಾರ್ಥಿಗಳು ಸಂಸ್ಕೃತ **ಕಾವ್ಯ ನಾಲ್ಕನೇ** ಪತ್ರಿಕೆಯನ್ನು ವೇದಮೂಲ, ಜೈನ ಪ್ರವೀಣ **ಸಾಹಿತ್ಯ ತರಗತಿಯ ವ್ಯಾಕರಣ** ಪತ್ರಿಕೆಯನ್ನು ಬರೆಯುವುದು ಕಡ್ಡಾಯ.

14. ಶಾಲಾ/ಕಾಲೇಜುಗಳ ಅನುದಾನ ಸಂಹಿತಾ ನಿಯಮದಂತೆ ಸಂಸ್ಕೃತ ಪ್ರಥಮಾ, ಕಾವ್ಯ, ಸಾಹಿತ್ಯ, ವೇದ ಪ್ರಥಮಾ, ಪ್ರವೇಶ ಮೂಲ ಹಾಗೂ ಜೈನ ಪ್ರಯೋಗ ಪ್ರವೇಶಿಕಾ, ಜೈನ ಪ್ರವೀಣ ಪರೀಕ್ಷೆಗಳಿಗೆ ಕ್ರಮವಾಗಿ ಕನಿಷ್ಠ 20, 15, 10 ವಿದ್ಯಾರ್ಥಿಗಳನ್ನು ಕೂರಿಸುವುದು ಕಡ್ಡಾಯವಾಗಿರುತ್ತದೆ.

15. ಪರಿಶಿಷ್ಟಜಾತಿ, ಪರಿಶಿಷ್ಟವರ್ಗ ಹಾಗೂ ವರ್ಗ-1ರ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ಇದ್ದು ಇವರಿಗೆ ಅಂಕಪಟ್ಟಿ ಶುಲ್ಕ 20/-ರೂ ಗಳನ್ನು ನಿಗಧಿಗೊಳಿಸಲಾಗಿದೆ. ಪರೀಕ್ಷಾ ಶುಲ್ಕ ವಿನಾಯಿತಿ ಪಡೆಯುವ ವಿದ್ಯಾರ್ಥಿಗಳಿಂದ ಜಾತಿ ಪ್ರಮಾಣ ಪತ್ರದ ನಕಲು ಪತ್ರಗಳು ಇಲ್ಲದಿದ್ದರೆ ಪರೀಕ್ಷಾ ಶುಲ್ಕದ ದುಪ್ಪಟ್ಟು ಹಣವನ್ನು ಶಾಲಾ/ಕಾಲೇಜು ಮುಖ್ಯಸ್ಥರೇ ಭರಿಸಬೇಕಾಗುತ್ತದೆ.

**ಪರೀಕ್ಷಾ ಶುಲ್ಕ ವಿವರ**

| ವಿಷಯಗಳು | ಪರೀಕ್ಷಾ ಶುಲ್ಕ | ಅಂಕಪಟ್ಟಿ ಶುಲ್ಕ | ಒಟ್ಟು ಮೊತ್ತ |
|---|---|---|---|
| ಸಂಸ್ಕೃತ ಪ್ರಥಮಾ, ವೇದ ಪ್ರಥಮಾ<br>ಜೈನ ಪ್ರಯೋಗ ಪ್ರಥಮಾ | 70.00 | 20.00 | 90.00 |
| ಸಂಸ್ಕೃತ ಕಾವ್ಯ, ವೇದ ಪ್ರವೇಶ<br>ಜೈನ ಪ್ರಯೋಗ ಪ್ರವೇಶಿಕಾ | 130.00 | 20.00 | 150.00 |
| ಸಂಸ್ಕೃತ ಸಾಹಿತ್ಯ, ವೇದ ಮೂಲ<br>ಜೈನ ಪ್ರಯೋಗ ಪ್ರವೀಣ | 190.00 | 20.00 | 210.00 |

16. ಸಾಹಿತ್ಯ ಪರೀಕ್ಷೆಯ ಪುನರಾವರ್ತಿತ ಅಭ್ಯರ್ಥಿಗಳಿಗೆ ಅರ್ಜಿಯೊಂದಿಗೆ ನಿರ್ದೇಶನಾಲಯದಿಂದ ನೀಡಿರುವ ಅಧಿಕೃತ ಅನುತ್ತೀರ್ಣ ಅಂಕಪಟ್ಟಿಯನ್ನು ಪೂರ್ಣ ಮಾಹಿತಿಗಳೊಂದಿಗೆ ಭಾವಚಿತ್ರ ಸಹಿತ ಸ್ಪಷ್ಟವಾಗಿ ನಮೂದಿಸಿ ದೃಢೀಕರಿಸಿ ಸಲ್ಲಿಸುವುದು.

17. ನಾಮಾಂಕಿತ ಪಟ್ಟಿಯಲ್ಲಿ ಕೇಂದ್ರ ಸಂಖ್ಯೆ ಹೆಸರು ಮತ್ತು ಶಾಲಾ ಸಂಕೇತ ಮತ್ತು ಹೆಸರನ್ನು ಪೂರ್ಣ ವಿಳಾಸದೊಂದಿಗೆ ಅಂಚೆ ಕಛೇರಿಯ ಪಿನ್ ಕೋಡ್ ಸಹಿತವಾಗಿ ತಪ್ಪದೇ ನಮೂದಿಸುವುದು.

18. ಜೈನ ಪ್ರಯೋಗ ಪ್ರವೇಶಿಕಾ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳು 8ನೇ ತರಗತಿ ಅಥವಾ ಸಂಸ್ಕೃತ ಪ್ರಥಮಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

19. ಜೈನ ಪ್ರಯೋಗ ಪ್ರವೀಣ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳು 10ನೇ ತರಗತಿ ಅಥವಾ ಜೈನ ಪ್ರಯೋಗ ಪ್ರವೇಶಿಕಾ ಅಥವಾ ಜೈನ-ಆಗಮ ಪ್ರವೀಣ ಪರೀಕ್ಷೆ ಉತ್ತೀರ್ಣತೆ ಕಡ್ಡಾಯವಾಗಿರುತ್ತದೆ.

20. ಶಾಲಾ ಖಾಸಗೀ ಮತ್ತು ಪುನರಾವರ್ತಿತ ಅಭ್ಯರ್ಥಿಗಳ ತರಗತಿ/ಜಾತಿವಾರು ಮಾಹಿತಿಗಳನ್ನು ನಮೂನೆ-1 ರಲ್ಲಿ ಸಲ್ಲಿಸುವುದು.

21. ಎಲ್ಲಾ ತರಗತಿಗಳ ಪ್ರಶ್ನೆ ಪತ್ರಿಕೆಗಳು ಪ್ರಸಕ್ತ ಶೈಕ್ಷಣಿಕ ವರ್ಷದ ಪಠ್ಯ ವಿಷಯಗಳಿಗೆ ಅನುಗುಣವಾಗಿರುತ್ತದೆ.

22. ಖಾಸಗಿಯಾಗಿ ಸಂಸ್ಕೃತ, ವೇದ ಮತ್ತು ಜೈನ ತರಗತಿಗಳ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಯಾವುದೇ ವರ್ಗದ ಅಭ್ಯರ್ಥಿಗಳಿಗೆ ನೋಂದಣಿ ಶುಲ್ಕದಲ್ಲಿ ವಿನಾಯಿತಿ ಇರುವುದಿಲ್ಲ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ವರ್ಗ-1 ರ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದಲ್ಲಿ ವಿನಾಯಿತಿ ಇರುತ್ತದೆ. ನೋಂದಣಿ ಶುಲ್ಕವನ್ನು ಪ್ರತ್ಯೇಕವಾಗಿ ಡಿ.ಡಿ ಮೂಲಕ ಸಲ್ಲಿಸುವುದು.

23. ಒಂದೇ ಸಾರಿ ಸಂಸ್ಕೃತ ಹಾಗೂ ವೇದ, ಜೈನ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.

24. **F**-(ಶಾಲಾ ಅಭ್ಯರ್ಥಿಗಳು) **R**-(ಪುನರಾವರ್ತಿತ ಅಭ್ಯರ್ಥಿಗಳು) **P**-(ಖಾಸಗಿ ಅಭ್ಯರ್ಥಿಗಳು) ಪ್ರತ್ಯೇಕವಾಗಿ ಅರ್ಜಿಯಲ್ಲಿ ಗುರುತಿಸುವುದು.

# ಖಾಸಗಿ ಅಭ್ಯರ್ಥಿಗಳ ಪ್ರವೇಶಾರ್ಹತೆಗಳು

**1) ಸಂಸ್ಕೃತ ಪ್ರಥಮಾ-ವೇದ ಪ್ರಥಮಾ :**

1. ಸಂಸ್ಕೃತ ಪ್ರಥಮಾ/ವೇದ ಪ್ರಥಮಾ ಮತ್ತು ಜೈನ ಪ್ರಯೋಗ ಪ್ರಥಮಾ ಅಭ್ಯರ್ಥಿಗಳಿಗೆ ದಿನಾಂಕ:31.12.2016ಕ್ಕೆ 12 ವರ್ಷ ತುಂಬಿರಬೇಕು.ಜನ್ಮದಿನಾಂಕದ ದೃಢೀಕರಣ ಪತ್ರ ನೀಡುವುದು.
2. ಸಾಮಾನ್ಯ ಶಿಕ್ಷಣ 8ನೇ ತರಗತಿಯಲ್ಲಿ ಅಧ್ಯಯನ ಮಾಡುತ್ತಿರುವವರು/ಉತ್ತೀರ್ಣರಾದವರು.

**2) ಸಂಸ್ಕೃತ ಕಾವ್ಯ-ವೇದ ಪ್ರವೇಶ-ಜೈನಪ್ರಯೋಗ ಪ್ರವೇಶಿಕಾ :**

1. ಸಂಸ್ಕೃತ ಕಾವ್ಯ, ವೇದ ಪ್ರವೇಶ ಮತ್ತು ಜೈನ ಪ್ರಯೋಗ ಪ್ರವೇಶಿಕಾ ಅಭ್ಯರ್ಥಿಗಳಿಗೆ ದಿನಾಂಕ : 31.12.2016 ಕ್ಕೆ 15 ವರ್ಷ ತುಂಬಿರಬೇಕು. ಜನ್ಮದಿನಾಂಕದ ದೃಢೀಕರಣ ಪತ್ರ ನೀಡುವುದು.
2. ಸಾಮಾನ್ಯ ಶಿಕ್ಷಣ 10ನೇ ತರಗತಿಯಲ್ಲಿ ಅಧ್ಯಯನ ಮಾಡುತ್ತಿರುವವರು/ಉತ್ತೀರ್ಣರಾವರು ಅಥವಾ ಸಂಸ್ಕೃತ ಪ್ರಥಮಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಎರಡು ವರ್ಷ ತುಂಬಿರಬೇಕು.
3. ವೇದ ಪ್ರಥಮಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

**3) ಸಂಸ್ಕೃತ ಸಾಹಿತ್ಯ-ವೇದ ಮೂಲ-ಜೈನಪ್ರಯೋಗ ಪ್ರವೀಣ :**

1. ಸಂಸ್ಕೃತ ಸಾಹಿತ್ಯ, ವೇದ ಮೂಲ ಪ್ರಸಿದ್ಧ ಮತ್ತು ಜೈನಪ್ರಯೋಗ ಪ್ರವೀಣ ಪರೀಕ್ಷಾ ಅಭ್ಯರ್ಥಿಗಳಿಗೆ ದಿನಾಂಕ: 31.12.2016 ಕ್ಕೆ 17 ವರ್ಷ ತುಂಬಿರಬೇಕು. ಜನ್ಮ ದಿನಾಂಕ ಪತ್ರ ನೀಡುವುದು.
2. ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಸಂಸ್ಕೃತವನ್ನು ಪ್ರಥಮಾ, ದ್ವಿತೀಯ ಅಥವಾ ತೃತೀಯ ಭಾಷೆಯಾಗಿ ಅಧ್ಯಯನ ಮಾಡಿರಬೇಕು.
3. ಸಂಸ್ಕೃತ ಕಾವ್ಯ, ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಎರಡು ವರ್ಷಗಳಾಗಿರಬೇಕು.
4. ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆ ನಡೆಸುವ ಆಗಮ ಪ್ರವರ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಎರಡು ವರ್ಷ ಪೂರ್ಣಗೊಳಿಸಿರಬೇಕು.
5. ವೇದ ಪ್ರವೇಶ ಪರೀಕ್ಷೆ ಉತ್ತೀರ್ಣರಾಗಿ ಎರಡು ವರ್ಷ ಪೂರ್ಣಗೊಳಿಸಿರಬೇಕು.

# ಖಾಸಗಿ ಅಭ್ಯರ್ಥಿಗಳ ನೋಂದಣಿ ಶುಲ್ಕ ವಿವರ

| ವಿಷಯಗಳು | ಪರೀಕ್ಷಾ ಶುಲ್ಕ | ಅಂಕಪಟ್ಟಿ ಶುಲ್ಕ | ನೋಂದಣಿ ಶುಲ್ಕ | ಒಟ್ಟು ಮೊತ್ತ |
|---|---|---|---|---|
| ಸಂಸ್ಕೃತ ಪ್ರಥಮಾ, ವೇದ ಪ್ರಥಮಾ ಜೈನ ಪ್ರಯೋಗ ಪ್ರಥಮಾ | 70.00 | 20.00 | 100.00 | 190.00 |
| ಸಂಸ್ಕೃತ ಕಾವ್ಯ, ವೇದ ಪ್ರವೇಶ ಜೈನ ಪ್ರಯೋಗ ಪ್ರವೇಶಿಕಾ | 130.00 | 20.00 | 200.00 | 350.00 |
| ಸಂಸ್ಕೃತ ಸಾಹಿತ್ಯ, ವೇದ ಮೂಲ ಜೈನ ಪ್ರಯೋಗ ಪ್ರವೀಣ | 190.00 | 20.00 | 300.00 | 510.00 |

**ನಿರ್ದೇಶಕರು**

# ಅನುಬಂಧ - 1

ಪಾಠಶಾಲೆಯ ಹೆಸರು ಮತ್ತು ಶಾಲಾ ಸಂಕೇತ :

ತರಗತಿ - ಸಂ. ಪ್ರಥಮಾ/ವೇದ ಪ್ರಥಮಾ :

ಕೇಂದ್ರ ಸಂಕೇತ :

| ಕ್ರ.ಸಂ. | ನೋಂದಣಿ ಸಂಖ್ಯೆ | ವಿದ್ಯಾರ್ಥಿಯ ಹೆಸರು | ತಂದೆಯ ಹೆಸರು | P - 1 | P - 2 |
|---|---|---|---|---|---|
| 1. | | ನಾಗರತ್ನ ಡಿ.ಆರ್. | ರಾಮಣ್ಣ | √ | √ |
| 2. | | ಶೀಲಾ ಎಚ್.ಆರ್. | ರಾಜು ಹೆಚ್.ವಿ. | √ | √ |
| 3. | | ವಿನೋದ ಜಿ.ಆರ್. | ರಾಮಣ್ಣ | √ | √ |
| 4. | | ಸುನಿಲ್‌ಕುಮಾರ್ ಟಿ.ಆರ್. | ರೇಣುಕಾಪ್ರಸಾದ್ | √ | √ |
| | | | | | |
| | | | | | |
| | | | | | |
| | | | | | |

# ಅನುಬಂಧ - 1

ಪಾಠಶಾಲೆಯ ಹೆಸರು ಮತ್ತು ಶಾಲಾ ಸಂಕೇತ ಸಂಖ್ಯೆ :

ತರಗತಿ - ಕಾವ್ಯ/ವೇದ ಪ್ರಥಮಾ :

ಕೇಂದ್ರ ಸಂಕೇತ :

| ಕ್ರ.ಸಂ. | ನೋಂದಣಿ ಸಂಖ್ಯೆ | ವಿದ್ಯಾರ್ಥಿಯ ಹೆಸರು | ತಂದೆಯ ಹೆಸರು | K1-1P | K1-2 | K - 1 | K - 2 | K - 3 | K - 4 |
|---|---|---|---|---|---|---|---|---|---|
| 1. | | ನಾಗರತ್ನ ಡಿ.ಆರ್. | ರಾಮಣ್ಣ | ಕನ್ನಡ | ಇಂಗ್ಲೀಷ್ | √ | √ | √ | √ |
| 2. | | ಶೀಲಾ ಎಚ್.ಆರ್. | ರಾಜು ಹೆಚ್.ವಿ. | ಸಂಸ್ಕೃತ | ಹಿಂದಿ | √ | √ | √ | √ |
| 3. | | ವಿನೋದ ಜಿ.ಆರ್. | ರಾಮಣ್ಣ | Z | Z | √ | √ | √ | √ |
| 4. | | ಸುನಿಲ್‌ಕುಮಾರ್ ಟಿ.ಆರ್. | ರೇಣುಕಾಪ್ರಸಾದ್ | Z | Z | √ | √ | √ | √ |
| | | | | | | | | | |
| | | | | | | | | | |
| | | | | | | | | | |
| | | | | | | | | | |

| ಭಾಷಾ ಪತ್ರಿಕೆ ಬರೆಯುವ ವಿದ್ಯಾರ್ಥಿಗಳ ಸಂಖ್ಯೆ | ಸಂಖ್ಯೆ | ಭಾಷಾ ವಿನಾಯಿತಿ ವಿದ್ಯಾರ್ಥಿಗಳ ಸಂಖ್ಯೆ | ಸಂಖ್ಯೆ |
|---|---|---|---|
| ಸಂಸ್ಕೃತ | | ಸಂಸ್ಕೃತ | |
| ಕನ್ನಡ | | ಕನ್ನಡ | |
| ಹಿಂದಿ | | ಹಿಂದಿ | |
| ಇಂಗ್ಲೀಷ್ | | ಇಂಗ್ಲೀಷ್ | |
| ಒಟ್ಟು | | ಒಟ್ಟು | |

# ಅನುಬಂಧ - 1

**School Name and School Code :**

**Class : Sahitya/Vedamula :**

**Center Code :**

| S.L. | Registar No | Students Name | Father Name | Mother Name | S l -1 | S l -2 | S-1 | S-2 | S-3 | S-4 |
|---|---|---|---|---|---|---|---|---|---|---|
| 1 | | Nagarathna D.R | Ramanna | Latha | **Kannada** | **Hindi** | √ | √ | √ | √ |
| 2 | | Sheela H.R | Raju H.V | Umadevi | **Z** | **Z** | √ | √ | √ | √ |
| 3 | | Vinoda G.R | Ramanna | Mangala | **Sanskrit** | **English** | √ | √ | √ | √ |
| 4 | | Sunilkumar | Renukaprasad | Vijaya | **Z** | **Z** | √ | √ | √ | √ |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |

| ಭಾಷಾ ಪತ್ರಿಕೆ ಬರೆಯುವ ವಿದ್ಯಾರ್ಥಿಗಳ ಸಂಖ್ಯೆ | ಸಂಖ್ಯೆ | ಭಾಷಾ ವಿನಾಯಿತಿ ವಿದ್ಯಾರ್ಥಿಗಳ ಸಂಖ್ಯೆ | ಸಂಖ್ಯೆ |
|---|---|---|---|
| ಸಂಸ್ಕೃತ | | ಸಂಸ್ಕೃತ | |
| ಕನ್ನಡ | | ಕನ್ನಡ | |
| ಹಿಂದಿ | | ಹಿಂದಿ | |
| ಇಂಗ್ಲೀಷ್ | | ಇಂಗ್ಲೀಷ್ | |
| ಒಟ್ಟು | | ಒಟ್ಟು | |

# ಅನುಬಂಧ - 2

| ಪಾಠಶಾಲೆಯ ಹೆಸರು ಮತ್ತು ಶಾಲಾ ಸಂಕೇತ ಸಂಖ್ಯೆ | | | | | | ಕೇಂದ್ರ ಸಂಕೇತ | |
|---|---|---|---|---|---|---|---|
| ಕ್ರ. ಸಂ. | ವಿದ್ಯಾರ್ಥಿಯ ಹೆಸರು | ತಂದೆಯ ಹೆಸರು | ತಾಯಿಯ ಹೆಸರು | ಜನ್ಮ ದಿನಾಂಕ | ಜಾತಿ ಸಂಕೇತ | ಪಾವತಿಸಿದ ಶುಲ್ಕದ ವಿವರ | ಶುಲ್ಕ ವಿನಾಯಿತಿಗೆ ಕಾರಣಗಳು (ವಿನಾಯಿತಿ ಇದ್ದಲ್ಲಿ) |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |

| ನಾಮಾಂಕಿತ ಪಟ್ಟಿಯ ವಿವರ | ವಿದ್ಯಾರ್ಥಿಗಳ ಸಂಖ್ಯೆ |
|---|---|
| ಎಸ್.ಸಿ. | |
| ಎಸ್.ಟಿ. | |
| ಪ್ರವರ್ಗ - 1 | |
| ಸಾಮಾನ್ಯ | |
| ಒಟ್ಟು ಮೊತ್ತ | |

| ಬ್ಯಾಂಕಿನ ಹೆಸರು | |
|---|---|
| ಡಿ.ಡಿ. ಮೊತ್ತ | |
| ಡಿ.ಡಿ. ಸಂಖ್ಯೆ | |
| ಡಿ.ಡಿ. ತೆಗೆದ ದಿನಾಂಕ | |